ದಿನಾಂಕ 31.08.2016ರಂದು ಬೆಳಿಗ್ಗೆ 10.30 ಘಂಟೆಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ನಡೆದ ಗ್ರಾಮೀಣ ಇಂಧನ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಸಭೆಯ ನಡವಳಿಗಳು.

ಹಾಜರಾದ ಅಧಿಕಾರಿಗಳ ಪಟ್ಟಿ ಲಗತ್ತಿಸಿದೆ.

---

ನಿರ್ದೇಶಕರು (ಗ್ರಾಮೂಸೌ–2) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರು ಸಭೆಗೆ ಹಾಜರಾದ ಜಿಲ್ಲಾ ಪಂಚಾಯತ್‌ನ ಉಪ ಕಾರ್ಯದರ್ಶಿ(ಅಭಿವೃದ್ಧಿ)/ಯೋಜನಾ ನಿರ್ದೇಶಕರು ಮತ್ತು ಸಮಗ್ರ ಗ್ರಾಮೀಣ ಇಂಧನ ಕಾರ್ಯಕ್ರಮದ ಯೋಜನಾ ಅಭಿಯಂತರರನ್ನು ಸಭೆಗೆ ಸ್ವಾಗತಿಸಿದರು.

1. ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆ:

1. ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ 2016–17ನೇ ಸಾಲಿನ ಜುಲೈ 2016 ರ ಅಂತ್ಯದವರೆಗಿನ ಪ್ರಗತಿ ವರದಿಯನ್ನು ಪರಿಶೀಲಿಸಿದ್ದು, ಬಹುತೇಕ ಜಿಲ್ಲಾ ಪಂಚಾಯತ್‌ಗಳು ಶೂನ್ಯ ಪ್ರಗತಿ ಸಾಧಿಸಿರುವುದನ್ನು ಸಭೆಯು ಗಂಭೀರವಾಗಿ ಪರಿಗಣಿಸಿದ್ದು, ತ್ವರಿತವಾಗಿ ಕೇಂದ್ರ ಸರ್ಕಾರವು ನಿಗದಿಪಡಿಸಿದ ಭೌತಿಕ ಗುರಿಯನ್ನು ಪೂರ್ಣವಾಗಿ ಸಾಧಿಸಲು ಸೂಕ್ತ ಕ್ರಮ ವಹಿಸುವುದು.
2. ಕಾರ್ಯಕ್ರಮದಡಿ ಪೂರ್ಣ ಪ್ರಮಾಣದಲ್ಲಿ ಪ್ರಗತಿ ಸಾಧಿಸಲು IEC ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.( ಉದಾ: ಗ್ರಾಮ ಸಭೆಗಳಲ್ಲಿ ಕಾರ್ಯಕ್ರಮದ ಪ್ರಯೋಜನ ಕುರಿತಂತೆ ಅರಿವು ಮತ್ತು ಜಾಗೃತಿ ಮೂಡಿಸುವುದು, ಪ್ರಚಾರ ಕಾರ್ಯಕ್ರಮ, ಗೋಡೆ ಬರಹ, ಭಿತ್ತಿ ಪತ್ರಗಳು ಇತ್ಯಾದಿ)
3. 2015–16ನೇ ಸಾಲಿಗೆ ಕಾರ್ಯಕ್ರಮದಡಿ ಸಿಎ ಆಡಿಟ್ ವರದಿ ಹಾಗೂ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸದೇ ಇರುವ ಜಿಲ್ಲಾ ಪಂಚಾಯತ್‌ಗಳಿಗೆ ಕೂಡಲೇ ಸಲ್ಲಿಸುವಂತೆ ತಿಳಿಸಲಾಯಿತು.
4. 2009–10ರಿಂದ 2014–15ನೇ ಸಾಲಿನವರೆಗೆ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ಇದ್ದ ಟರ್ನ್ ಕೀ ಫೀ ನಿರ್ವಹಣಾ ವೆಚ್ಚವನ್ನು GSK ತಂತ್ರಾಂಶದಲ್ಲಿ ಪಾವತಿಸುವ ಕುರಿತಂತೆ ಅಗತ್ಯ ವಿವರಗಳನ್ನು ತಂತ್ರಾಂಶದಲ್ಲಿ ಅಳವಡಿಸಿ, ಇಂಧೀಕರಿಸಲು NIC ರವರನ್ನು ಕೋರಲು ತೀರ್ಮಾನಿಸಲಾಯಿತು
5. ಕಾರ್ಯಕ್ರಮದ ಪ್ರಗತಿಯ ನಿಟ್ಟಿನಲ್ಲಿ ಘಟಕಗಳ ಅಂದಾಜು ವೆಚ್ಚಕ್ಕೆ ಸಂಬಂಧಿಸಿದಂತೆ ಕೇಂದ್ರ & ರಾಜ್ಯ ಸಹಾಯಧನದೊಂದಿಗೆ ಎಂಜಿಎನ್‌ಆರ್‌ಇಜಿಎ ಸಹಯೋಗದೊಂದಿಗೆ ಘಟಕಗಳನ್ನು ನಿರ್ಮಿಸುವ ಕುರಿತಂತೆ ಕ್ರಮವಹಿಸಲಾಗುತ್ತಿದೆಯೆಂದು ನಿರ್ದೇಶಕರು(ಗ್ರಾಮೂಸೌ–2)ರವರು ಸಭೆಯ ಗಮನಕ್ಕೆ ತಂದರು.
6. ಇಲಾಖೆಯಲ್ಲಿ ನಡೆಯುವ ಎಂಪಿಸಿ ಸಭೆಗೆ ನಿಗದಿತ ಅವಧಿಯಲ್ಲಿ ಪ್ರಗತಿ ವರದಿಯನ್ನು ಕ್ರೋಡೀಕರಿಸಿ ನೀಡಬೇಕಿರುವ ನಿಟ್ಟಿನಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮ ಮತ್ತು ಸೌರಬೆಳಕು ಯೋಜನೆಯಡಿ ಪ್ರಗತಿ ವರದಿಯನ್ನು ಪ್ರತಿ ಮಾಹೆ 5ನೇ ತಾರೀಖಿನೊಳಗೆ ಸರ್ಕಾರಕ್ಕೆ ಸಲ್ಲಿಸುವುದು. ತದನಂತರ ಸಲ್ಲಿಕೆಯಾಗುವ ಪ್ರಗತಿ ವರದಿಗಳನ್ನು ಪರಿಗಣಿಸಲಾಗುವುದಿಲ್ಲ.
7. ಜಿಲ್ಲಾವಾರು/ಘಟಕವಾರು ಅಂದಾಜು ವೆಚ್ಚದ ವಿವರಗಳನ್ನು ನಿಗದಿತ ನಮೂನೆಯಲ್ಲಿ ಕೂಡಲೇ ಸರ್ಕಾರಕ್ಕೆ ಸಲ್ಲಿಸಲು ತಿಳಿಸಲಾಯಿತು.

1. 2015–16ನೇ ಸಾಲಿಗೆ ಸಂಬಂಧಿಸಿದಂತೆ ಯೋಜನೆಯಡಿ ಸೌರಬೀದಿ ದೀಪಗಳ ಅನುಷ್ಠಾನ ಹಾಗೂ ಕಾರ್ಯಚರಣೆ ಕುರಿತಂತೆ ಕ್ರಮವಹಿಸಿ, ಹಣಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವಂತೆ ತಿಳಿಸಲಾಯಿತು.
2. 2016–17ನೇ ಸಾಲಿನಲ್ಲಿ ಯೋಜನೆಯಡಿ ಆಯ್ಕೆಯಾದ ಪ್ರಾಯೋಗಿಕ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಯೋಜನೆಯಡಿ ಪ್ರಾಥಮಿಕ ಚಟುವಟಿಕೆಗಳನ್ನು ಕೈಗೊಂಡು, ಕೈಗೊಂಡ ವರದಿಯನ್ವಯ ಅನುದಾನ ಬಿಡುಗಡೆಗೆ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವುದು ಹಾಗೂ ನಿಗದಿತ ಅವಧಿಯೊಳಗೆ ಯೋಜನೆಯಡಿ ಸೌರ ಬೀದಿ ದೀಪಗಳನ್ನು ಅಳವಡಿಕೆ ಮತ್ತು ಕಾರ್ಯಾಚರಣೆ ಕುರಿತಂತೆ ಕ್ರಮವಹಿಸುವುದು.
3. LA& LC ಗಳಿಗೆ ಉತ್ತರಗಳನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸಲು ತಿಳಿಸಲಾಯಿತು.

3. ಡಿಆರ್‌ಡಿಎ ಆಡಳಿತ ಯೋಜನೆ :

ಡಿಆರ್‌ಡಿಎ ಆಡಳಿತ ಯೋಜನೆಯಲ್ಲಿ ಜುಲೈ 2016ರ ಪ್ರಗತಿ ವರದಿಯನುಸಾರ ಶೇ. 60 ರಷ್ಟು ವೆಚ್ಚವಾಗಿದ್ದು, ಅದರಂತೆ ಬಾಗಲಕೋಟೆ, ಬೆಳಗಾವಿ, ಬೀದರ್, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಕೋಲಾರ, ಮೈಸೂರು ಮತ್ತು ಶಿವಮೊಗ್ಗ ಜಿಲ್ಲೆಗಳವರು ಹಾಗೂ ಉಳಿದ ಜಿಲ್ಲೆಗಳವರು ಸಹ ಶೇ.60 ಪ್ರತಿಶತ ಅನುದಾನವನ್ನು ವೆಚ್ಚ ಮಾಡಿ ಎರಡನೇ ಕಂತಿನ ಅನುದಾನ ಬಿಡುಗಡೆಗಾಗಿ ಪ್ರಸ್ತಾವನೆಯನ್ನು ಇಂಕ್ ಪ್ಯಾಡ್ ಸೀಲ್ ಮತ್ತು ಸಹಿಯೊಂದಿಗೆ ದ್ವಿಪ್ರತಿಯಲ್ಲಿ ಹಾಗೂ 2015–16ನೇ ಸಾಲಿನ ಹಣ ಬಳಕೆ ಪ್ರಮಾಣ ಪತ್ರವನ್ನು ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ನವದೆಹಲಿ ರವರಿಗೆ ಕಳುಹಿಸುವ ಸಲುವಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಿದರು. ಸಭೆಗೆ ಗೈರುಹಾಜರಾದ ಕೊಪ್ಪಳ ಹಾಗೂ ಯಾದಗಿರಿ ಜಿಲ್ಲಾ ಪಂಚಾಯತಿಯ ಯೋಜನಾ ನಿರ್ದೇಶಕರುಗಳಿಗೆ ಕಾರಣ ಕೇಳಿ ನೋಟೀಸನ್ನು ನೀಡಲು ನಿರ್ದೇಶಕರು ತಿಳಿಸಿದರು.

ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

(ಎಸ್. ಕೃಷ್ಣಪ್ಪ ಕೊಂಡಪಾಳ್ಯ)
ನಿರ್ದೇಶಕರು(ಗ್ರಾಮೂಸೌ–2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಸಂಖ್ಯೆ:ಗ್ರಾಅಪ:14:ಜೈಅಯೋ: 2016 ದಿನಾಂಕ: 01.09.2016

ಗೆ:

1. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಎಲ್ಲಾ ಜಿಲ್ಲಾ ಪಂಚಾಯತ್‌ನ ಉಪ ಕಾರ್ಯದರ್ಶಿ(ಅಭಿವೃದ್ಧಿ)/ಯೋಜನಾ ನಿರ್ದೇಶಕರು
3. ಎಲ್ಲಾ ಜಿಲ್ಲಾ ಪಂಚಾಯತ್‌ನ ಯೋಜನಾ ಅಭಿಯಂತರರು(ಸಗ್ರಾಇಂಕಾ)

ಪ್ರತಿಯನ್ನು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪಂರಾಜ್ ಇಲಾಖೆ .
2. ನಿರ್ದೇಶಕರು (ಗ್ರಾಮೂಸೌ–2), ರವರ ಆಪ್ತ ಸಹಾಯಕರು, ಗ್ರಾಅಪಂರಾಜ್ ಇಲಾಖೆ ಕಡತ.
3. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾಅಪಂರಾಜ್ ಇಲಾಖೆ
4. ರಕ್ಷಾ ಕಡತಕ್ಕೆ/ ಹೆಚ್ಚುವರಿ ಪ್ರತಿ

## ದಿನಾಂಕ 31.08.2016 ರಂದು ನಡೆದ ಗ್ರಾಇಂಕಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಹಾಜರಾದವರ ಪಟ್ಟಿ.

1. ಡಾ: ಎನ್. ನಾಗಾಂಬಿಕಾ ದೇವಿ, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಶ್ರೀ ಎನ್. ಕೃಷ್ಣಪ್ಪ, ನಿರ್ದೇಶಕರು (ಗ್ರಾಮೂಸೌ-2) ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ಶ್ರೀಮತಿ ಕಲಾವತಿ, ಯೋಜನಾ ನಿರ್ದೇಶಕರು (ಸಗ್ರಾಇಂಕಾ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
4. ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್, ಬಾಗಲಕೋಟೆ, ಬೆಂಗಳೂರು(ಗ್ರಾ), ಬೆಳಗಾವಿ, ಚಾಮರಾಜನಗರ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಗದಗ, ಹಾವೇರಿ. ಕೊಡಗು, ಮಂಡ್ಯ, ರಾಯಚೂರು ಮತ್ತು ತುಮಕೂರು.
5. ಉಪ ಕಾರ್ಯದರ್ಶಿ (ಅಭಿವೃದ್ಧಿ), ಜಿಲ್ಲಾ ಪಂಚಾಯತ್, ವಿಜಯಪುರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಗದಗ, ಶಿವಮೊಗ್ಗ ಮತ್ತು ತುಮಕೂರು.
6. ಸಹಾಯಕ ಯೋಜನಾ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾಸನ.
7. ಸಹಾಯಕ ಕಾರ್ಯದರ್ಶಿ(ಪ್ರಭಾರ), ಜಿಲ್ಲಾ ಪಂಚಾಯತ್, ರಾಮನಗರ.
8. ಶ್ರೀ ಮಾರ್ಕಂಡೇಯ್ಯ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್ ಬಾಗಲಕೋಟೆ & ವಿಜಯಪುರ.
9. ಶ್ರೀ ಎಂ. ಎಸ್. ಸುದರ್ಶನ್, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಬೆಂಗಳೂರು(ಗ್ರಾ).
10. ಶ್ರೀ ಶಿವಣ್ಣ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಬೆಂಗಳೂರು (ನ).
11. ಶ್ರೀ ಶಿವಾನಂದ ಕಮತಗಿ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಬೆಳಗಾವಿ.
12. ಶ್ರೀ ಜಿ. ಎಲ್. ಬದಿ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಬಳ್ಳಾರಿ & ಕೊಪ್ಪಳ.
13. ಶ್ರೀ ವೀರಣ್ಣ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಬೀದರ್.
14. ಶ್ರೀ ಬಸವರಾಜ್ ಯಲಬುರಗಿ , ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಮಂಡ್ಯ & ಚಾಮರಾಜನಗರ.
15. ಶ್ರೀ ಜಯಕುಮಾರ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು & ಶಿವಮೊಗ್ಗ.
16. ಶ್ರೀ ಬಸವರಾಜಪ್ಪ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ದಾವಣಗೆರೆ & ಚಿತ್ರದುರ್ಗ.
17. ಶ್ರೀ ದತ್ತಾತ್ರಿ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಹಾಸನ, ದಕ್ಷಿಣ ಕನ್ನಡ ಮತ್ತು ಉಡುಪಿ.
18. ಶ್ರೀ ಕೃಷ್ಣ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಉತ್ತರ ಕನ್ನಡ & ಧಾರವಾಡ.
19. ಶ್ರೀ ಉತ್ತಮ ಕುಮಾರ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಹಾವೇರಿ & ಗದಗ.
20. ಶ್ರೀ ರಾಜೇಂದ್ರ ದಂಡೆ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಕಲಬುರಗಿ.
21. ಶ್ರೀ ನಾಗೇಶ್, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಕೊಡಗು.
22. ಶ್ರೀ ಮರಳ ಸಿದ್ದೇಶ್ವರ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ & ಕೋಲಾರ.
23. ಶ್ರೀ ಮುರ್ತುಜ ಆಲಿ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಮೈಸೂರು.
24. ಶ್ರೀ ನಂಜುಂಡೇ ಗೌಡ, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ರಾಮನಗರ.
25. ಶ್ರೀ ಎಸ್. ಪಿ. ಪಾಟೀಲ್, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ಯಾದಗಿರಿ.
26. ಶ್ರೀ ಶ್ರೀನಿವಾಸ್, ಯೋಜನಾ ಅಭಿಯಂತರರು(ಸಗ್ರಾಇಂಕಾ), ಜಿಲ್ಲಾ ಪಂಚಾಯತ್, ತುಮಕೂರು.
27. ಶ್ರೀಮತಿ ನೇತ್ರಾವತಿ, ಅಧೀಕ್ಷಕರು, ಗ್ರಾಮೂಸೌ-2, ಗ್ರಾಅಪಂ. ರಾಜ್ ಇಲಾಖೆ.